Reg. No. | | | | | | | | |

# BASKAL 231/BASKAL 204/BSWKAL 231/BSWKAL 204/ HRDKAL 231/HRDKAL 204

**III Semester B.A./B.S.W./B.A. (HRD) Examination, April 2021**
**(2020-21 Batch/2018-19 Batch/2019-20 Batch) (Choice Based Credit System/Credit Based Semester Scheme)**

**ಕನ್ನಡ**

**ಕನ್ನಡ ಭಾಷಾ ಪತ್ರಿಕೆ – III**

Time : 3 Hours  Max. Marks : 80

I. ಕೆಳಗಿನವುಗಳಲ್ಲಿ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಕೀಚಕನು ಸೈರಂಧ್ರಿಯನ್ನು ಪಡೆಯಲು ಯತ್ನಿಸಿದ ಬಗೆಯು ಹೇಗೆ ಚಿತ್ರಿತವಾಗಿದೆ ? ವಿವರಿಸಿ.

**ಅಥವಾ**

ಹಿಂದಿನ ವೃತ್ತಾಂತವನ್ನು ಅಳಿಲು ನೆನೆದುಕೊಳ್ಳುವ ಬಗೆಯನ್ನು ವಿವರಿಸಿರಿ.

2) ರಸ್ತೆಯಲ್ಲಿ ಸಿಕ್ಕಿದ ಹಣವನ್ನು ಅದರ ವಾರಸುದಾರರಿಗೆ ತಲುಪಿಸಲು ನಾಯಕ್ ಮಾಡಿದ ಯತ್ನವು ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ ?

**ಅಥವಾ**

'ಕರೆ' ಕಥೆಯಲ್ಲಿ ವೃದ್ಧಾಪ್ಯದ ಏಕಾಂಗಿತನ ಮತ್ತು ನೆರೆಮನೆಯ ದಂಪತಿಗಳ ಬದುಕಿನ ವೈದೃಶ್ಯವು ಹೇಗೆ ಚಿತ್ರತವಾಗಿದೆ ? ವಿವರಿಸಿ.

3) ನಿಜವಾದ ಗುರು ನಿರಂತರವಾಗಿ ಕಲಿಯುತ್ತಿರುತ್ತಾನೆ ಎನ್ನುವುದು ಸಂಜೀವ ಸುವರ್ಣರ ವಿಚಾರದಲ್ಲಿ ಹೇಗೆ ಸತ್ಯವಾಗಿದೆ ? ಚರ್ಚಿಸಿ.

**ಅಥವಾ**

ಬನ್ನಂಜೆಯವರ ಇಂಗ್ಲೆಂಡ್ ಪ್ರವಾಸದ ವಿವರಗಳು ಹೇಗೆ ಸ್ವಾರಸ್ಯಕರವಾಗಿ ಮೂಡಿಬಂದಿವೆ ? ವಿವರಿಸಿ.

P.T.O.

II. ಕೆಳಗಿನವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ : **(3×5=15)**

1) 'ನಿಸರ್ಗದೊಂದಿಗಿನ ಕವಿಯ ಅನುಭವವು ರಾಜಾಸೀಟ್ ಹಾಡಾಯಿತು.' – ಕವನದಲ್ಲಿ ಹೇಗೆ ಮೂಡಿಬಂದಿದೆ ?

**ಅಥವಾ**

'ಭಗ್ನ ಪ್ರತಿಮೆ' ಕವನದಲ್ಲಿ ನಿರೂಪಕನು ಅನುಭವಿಸುವ ಕಷ್ಟಗಳೇನು ?

2) ವಕೀಲಿ ದಿನಗಳ ಸ್ವಾರಸ್ಯಗಳಲ್ಲಿ ಯಾವುದಾದರೂ ಒಂದನ್ನು ಆರಿಸಿ, ಅದು ಮೂಡಿಬಂದ ಬಗೆಯನ್ನು ವಿವರಿಸಿ.

**ಅಥವಾ**

ಕುವೆಂಪು ಅವರು ರಸಋಷಿ ಅನ್ನುವುದು ಲೇಖನದ ಮೂಲಕ ಸಾಧಿತವಾಗುವುದನ್ನು ಎರಡು ಘಟನೆಗಳ ಮೂಲಕ ವಿವರಿಸಿರಿ.

3) ಉಡುಪಿಯ ಯಕ್ಷಗಾನ ಕೇಂದ್ರವು ಸಂಜೀವ ಸುವರ್ಣರ ಜೀವನದಲ್ಲಿ ಕೊಟ್ಟ ತಿರುವು ಏನು ?

**ಅಥವಾ**

ಸಂಜೀವ ಸುವರ್ಣರ ಬದುಕಿನಲ್ಲಿ ಎದುರಾದ ಎರಡು ಅವಮಾನಕರ ಸಂಕಟ ಸನ್ನಿವೇಶಗಳನ್ನು ವಿವರಿಸಿರಿ.

III. **ಒಂದು** ಪದ್ಯಭಾಗದ ಹಿನ್ನೆಲೆ, ಸಂದರ್ಭ ಸೂಚಿಸಿ ಪದ್ಯಭಾಗವನ್ನು ವಿವರಿಸಿರಿ ಮತ್ತು ವಿಶ್ಲೇಷಿಸಿರಿ : **(1×5=5)**

ಏನು ಕೊರೆಯುತ್ತೀರಿ ಎಷ್ಟು ಬರೆಯುತ್ತೀರಿ
ತಿನ್ನಲಿಕೆ ಬರದ ಕವಿತೆ ?
ಜಗಮರೆತು ಶಬ್ದಗಳ ಬರಿದೆ ಅರಸುತ್ತೀರಿ
ಮಗು ಅರಸುವಂತೆ ಹಾತೆ

**ಅಥವಾ**

ಹರಿತ ಖಡ್ಗದ ಮೇಲೆ ಪುಟ್ಟ ನೊಣದ್ವಾರಾಟ ನೋಡಿ
ಎಚ್ಚರವಾಯ್ತು ಅಚ್ಚರಿಯ ಲೋಕದಲ್ಲಿದ್ದ ದೊರೆಗೆ
ಎಲ್ಲ ಅದ್ಭುತವಾಗಿದೆ. ಆದರೆ ಒಂದೇ ತಿಳಿಯಲಿಲ್ಲ, ಈ
ಸ್ತುತಿ ಅಡಗುವ ದಾರಿ ಹೋಗಿ ಮುಟ್ಟುವುದೆಲ್ಲಿಗೆ ?

IV. ಕೆಳಗಿನ **ಎರಡು** ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **(2×4=8)**

1) ನಿಂತಲ್ಲೇ ಅಣ್ಣ ಅಕ್ಕ ಮಗ ಮಗುವೆಂಬ ಸಂಸಾರ.
2) ದೇವರ ಪೀಠಕ್ಕೆ ಹಾಸಿದ ಹುಲಿಯ ಚರ್ಮ.
3) ಕಾಯಬೇಕಿದೆ ನೀವು ಪರಮಾನ್ನ ಕುದಿವನಕ.
4) ಸ್ಪರ್ಧೆ ಇದೆ ನೀವೆಲ್ಲ ಭಾಗವಹಿಸುವಿರಾ ?

V. ಅ) ಈ ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ : **(2×4=8)**

1) 'ವಾಸನೆ' ಪದದ ವಿವೇಚನೆ.
2) ಕೋಲಾ ಪ್ರಾಂತ್ಯದ ರಂದ್ರಕೊರೆತ.
3) ಅರೆಭಾಷೆ.
4) ಪಂಪ.

ಆ) ಈ ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ : **(2×4=8)**

i) ಚಿಕ್ಕಮೇಳ.
ii) ಗುರು ವೀರಭದ್ರ ನಾಯಕರು.
iii) ಬರ್ನಮ್ ವನ ನಾಟಕ.
iv) ಗುಂಡಿಬೈಲು ನಾರಾಯಣ ಶೆಟ್ಟರು.

VI. ಎಲ್ಲಾ ಪ್ರಶ್ನೆಗಳಿಗೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : **(1×12=12)**

1) 'ಹಿಂಸೆ ಎಂದರೆ' ಕವನವನ್ನು ಬರೆದವರು ಯಾರು ?
2) ಸಂತೆಯ ಮುದುಕ ರಾತ್ರಿಯನ್ನು ಬೆದರಿಸಲು ಏನು ಬಳಸುತ್ತಾನೆ ?
3) 'ತೊನ್ನು ಹತ್ತಿದ ಬೆಳದಿಂಗಳು' ಎಂಬ ರೂಪಕ ಯಾವ ಕವಿತೆಯಲ್ಲಿ ಬಳಕೆಯಾಗಿದೆ ?
4) ಪಂಪನ ಲೌಕಿಕ ಕಾವ್ಯ ಯಾವುದು ?
5) ಭೂಖಂಡಗಳ ಚಲನೆಯ ಸಿದ್ಧಾಂತವನ್ನು ಹೇಳಿದ ವಿಜ್ಞಾನಿ ಯಾರು ?
6) ಒಂದು ಪಾದದಷ್ಟು ಅಳತೆಯನ್ನು ಹೇಳಲು ಕನ್ನಡದಲ್ಲಿ ಬಳಕೆಯಲ್ಲಿರುವ ಪದವು ಯಾವುದು ?
7) ಕುವೆಂಪುರವರ ಮುದ್ದಿನ ಹಳ್ಳಿ ಯಾವುದು ?
8) 'ನಾಯಕ್' ನ ಪಕ್ಕದ ಊರಿನವರಾದ, ಅವನ ಪ್ರಾಮಾಣಿಕತೆಯನ್ನು ಮೆಚ್ಚಿದ ಮಹಿಳೆ ಯಾರು ?
9) ಸುವರ್ಣರನ್ನು ದೆಹಲಿಗೆ ಕರೆಸಿದ ಯನ್.ಯಸ್.ಡಿ.ಯ ನಿರ್ದೇಶಕರು ಯಾರು ?
10) ಸುವರ್ಣರು ಪಾಸ್‌ಪೋರ್ಟ್ ಮಾಡಿಸಿದ್ದು ತಮ್ಮ ಯಾವ ವೃತ್ತಿಗೆ ಸಹಾಯವಾಗಲಿ ಎಂಬ ಕಾರಣಕ್ಕೆ ?
11) ವೇಷ ಧರಿಸದೆ, ಕುಣಿಯದೆ, ಮಾತುಗಾರಿಕೆಯು ಪ್ರಧಾನವಾದ ಯಕ್ಷಗಾನದ ಪ್ರಕಾರ ಯಾವುದು ?
12) ಉಡುಪಿಯ ಯಕ್ಷಗಾನ ಕೇಂದ್ರದ ಭಾಗವತಿಕೆಯ ಮೊದಲ ಗುರುಗಳು ಯಾರು ?

---